(ಶ್ರೀ ಕಾಗೋಡು ತಿಮ್ಮಪ್ಪ)

ಕಡೆಗೆ ಸಹಾಯ ಮಾಡಬೇಕು, ತಾಲ್ಲೂಕ್ ಬೋರ್ಡುಗಳಿಗೆ ಸರಕಾರ ಹೆಚ್ಚು ಗ್ರಾಂಟು ಕೊಟ್ಟರೂ ಅವು ಎಲ್ಲ ಗ್ರಾಮಾಂತರ ಅಭಿವೃದ್ಧಿ ಕಾರ್ಯಗಳಿಗೇ ಸದ್ವಿನಿಯೋಗವಾಗುತ್ತಿದೆ; ಆದ್ದರಿಂದ ಇದರ ಕಡೆಗೆ ಸರಕಾರ ಗಮನ ಕೊಡಬೇಕೆಂದು ಅವರಲ್ಲಿ ಸಲಹೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಡಿಸ್‌ಪೆನ್‌ಸರೀಸ್‌ಗಳನ್ನು ಸರಕಾರವೇ ವಹಿಸಿ ಕೊಳ್ಳಬೇಕೆಂದು ಸಲಹೆ ಮಾಡಿದರು, ಇವನ್ನು ವಹಿಸಿಕೊಳ್ಳುವ ಬಗ್ಗೆ ಸರಕಾರ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಇದರ ಜೊತೆಯಲ್ಲೇ ಈ ಮಂಡಲಗಳು ತಮ್ಮ ಆಸ್ತಿಗಳನ್ನು ಬೆಳಸಿ ಕೊಳ್ಳಬೇಕು. They must grow in stature. ಇದರ ಜವಾಬುದಾರಿಯೂ ಇವರ ಮೇಲೆ ಬಿದ್ದಿರುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಇಲ್ಲಿರುವ ಬಾಕಿ ಪಟ್ಟಿ ಚಾಲ್ತಿ ಸಾಲಿನದಲ್ಲ. ಇವೆರಾಜ್ಞ ಹಿಂದೆ ಇದ್ದ ಜಿಲ್ಲಾ ಬೋರ್ಡುಗಳಲ್ಲಿ ಇದ್ದ ಬಾಕಿ ಹಣವನ್ನೆಲ್ಲಾ ಆಯಾ ಮಂಡಲಗಳಿಗೆ ವಹಿಸಿರುವುದರಿಂದ, ಅವರಿಗೆ ಇದರಲ್ಲಿ ಒಂದು ನಯಾಪೈಸಾ ಕೂಡ ತೀರಿಸಲು ಆಗಲಿಲ್ಲ. ಆದುದರಿಂದ ಸರಕಾರ ಇದನ್ನು ಮನ್ನಾ ಮಾಡಬೇಕೆಂದು ಎಲ್ಲ ತಾಲ್ಲೂಕು ಬೋರ್ಡುಗಳ ಮಂಡಳಿಗಳೂ ಒತ್ತಾಯ ಮಾಡುತ್ತಿವೆ, ಇದನ್ನು ಸರಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ, ಇದರಲ್ಲಿ 1,28,11,589 ರೂಪಯಿಗಳಷ್ಟು ಬಾಕಿ 1959ರಲ್ಲಿ ತಾಲ್ಲೂಕು ಬೋರ್ಡುಗಳು ಅಸ್ತಿತ್ವಕ್ಕೆ ಬಂದಾಗಿನಿಂದ ಇದೆ. ಮತ್ತು ಹಾಗೆಯೇ ಉಳಿಸಿಕೊಂಡು ಬರುತ್ತಿವೆ. ಇದರಲ್ಲಿ ಹಳೆಯ ಜಿಲ್ಲಾ ಬೋರ್ಡುಗಳ ಬಾಕಿ ಎಂದರೆ 59,14,414 ರೂಪಾಯಿಗಳು ಕೂಡ ಸೇರಿರುತ್ತದೆ, ಆದುದರಿಂದ ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ.

MADAM SPEAKER.—Sri D. B. Kalmankar may put Question No. 690.

Nationalisation of all Private Schools

690. Sri D. B. KALMANKAR (Afzalpur) [On behalf of SRI B. SATHYANARAYANA SINGH (Hospet)].—

Will the Minister for Education be pleased to state :—

whether there is any proposal under consideration of the Government to nationalise all private schools ?

Sri A. R. BADARINARAYANA (Minister for Education).—

No.

Sri D. B. KALMANKAR.—In view of the fact that now the major burden is being borne by the Government itself, will it not be proper that all such private schools are nationalised and thereafter they are subjected to the discipline of the Government ?

† Sri A. R. BADARINARAYANA.—Considering the fiscal, administrative and Constitutional difficulties, it would not be feasible to nationalise any private schools.

Sri D B. KALMANKAR.—May I know whether the Government has got under consideration nationalisation of these Private Schools in stages ?

Sri A. R. BADARINARAYANA.—Not yet.

ಶ್ರೀ ಬಾಪೂಗೌಡ ರಾಯಪ್ಪ.—ನೆರೆ ರಾಜ್ಯದಲ್ಲಿ ಖಾಸಗಿಯಿಗಿ ನಡೆಯುವ ವಿದ್ಯಾ ಸಂಸ್ಥೆಗಳನ್ನು ಸರಕಾರವೇ ನಡೆಸಬೇಕೇ ಬೇಡವೇ ಎನ್ನುವುದರ ಬಗೆಗೆ ಒಂದು ರೀತಿಯಾದ ಜಿಜ್ಞಾಸೆ ನಡೆಯುತ್ತಿದೆ. ಆದುದರಿಂದ ನಮ್ಮ ರಾಜ್ಯ ಸರಕಾರದವರೂ ಇಂತಹ ಖಾಸಗೀ ವಿದ್ಯಾ ಶಾಲೆಗಳನ್ನು ಹಂತ ಹಂತವಾಗಿ ವಹಿಸಿಕೊಳ್ಳಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

Sri A. R. BADARINARAYANA.—It is a suggestion for action.

ಶ್ರೀ ಎಂ. ಪಿಚ್. ಜಯಪ್ರಕಾಶ ನಾರಾಯಣ.—ಖಸಗೀ ಶಾಲೆಗಳನ್ನು ರಾಷ್ಟ್ರೀಕರಣ ಗೊಳಿಸುವುದನ್ನು ತತ್ವಶಃ ಒಪ್ಪಿಕೊಳ್ಳುವ ಹಾಗೆ ನಮ್ಮ ಉತ್ತರ ಇವೆ. ಈಗ ಆಗಿರತಕ್ಕ ಅನಾಹುತಗಳನ್ನು ನಿರಿಪಡಿಸುವುದಕ್ಕೆ ರಾಷ್ಟ್ರೀಕರಣ ಒಂದು ಉತ್ತಮವಾದ ಸಲಕೆಯಲ್ಲವೇ ? ಹಾಗೆ ರಾಷ್ಟ್ರೀಕರಣ ಮಾಡಿ ಪ್ರತಿಯೊಂದು ಶಾಲೆಯನ್ನು ತೆಗೆದುಕೊಳ್ಳಬೇಕಾದರೆ ಒಟ್ಟು ಸರಕಾರಕ್ಕೆ ಎಷ್ಟು ಖರ್ಚು ಬರುತ್ತದೆ ?

ಶ್ರೀ ಎ. ಆರ್. ಬದರೀನಾರಾಯಣ್.—ಇಪೊತ್ತಿನ ಸ್ಥಿತಿಯಲ್ಲಿ ಇದನ್ನು ಒಪ್ಪಿಕೊಳ್ಳುವುದೇ ಒಂದು ದೊಡ್ಡ ಕಷ್ಟವಾಗುತ್ತದೆ ; ಏಕೆಂದರೆ ಸರ್ಕಾರದ ಹತ್ತಿರ ಅಷ್ಟೊಂದು ಹಣವಿಲ್ಲ.

Sri B. B. SAYANAK.—The Private Schools are running on the basis of business principles. There are some schools where there are no school buildings, no students and not even teachers. When the Government is bearing 80 per cent of the expenditure in the shape of grant, why is it that the Government is not going to nationalise all these Private Schools ?

Sri D. DEVARAJ URS (Chief Minister).—This question of nationalisation of Private Schools at all levels is coming up now and then. Even supposing we take a decision to nationalise all the existing Schools, the first point is the finances involved ; that will run into huge figures. Secondly, afterwards if once we nationalise, it means we should not allow any private enterprise for the purpose of promoting education ; in which event, I am afraid it is not possible to cover the field of education by the Government alone. Therefore, this policy of allowing private enterprise also to come up in the field of education is being pursued since Independence in a very discreet and wiae manner. And to change that policy it is rather not practicable.

ಶ್ರೀ ಕೋಣಂದೂರು ಲಿಂಗಪ್ಪ.—ಇಪೊತ್ತಿನ ಸ್ಥಿತಿಯಲ್ಲಿ ಸಮಾಜ ವಾದವನ್ನು ದೇಶದಲ್ಲಿ ಜಾರಿಗೆ ತರಬೇಕೆಂದು ಘೋಷಣೆ ಮಾಡಿರುವಾಗ ಖಾಸಗೀ ಶಾಲೆಗಳನ್ನೆಲ್ಲಾ ಸರಕಾರವೇ ನಡೆಸಿಕೊಂಡು ಬರಬೇಕಾಗುತ್ತದೆ ಮತ್ತು ವಿದ್ಯಾಭ್ಯಾಸ ಕೊಡುವುದು ಒಂದು ಮೂಲಭೂತವಾದ ಹಕ್ಕಾಗಿರುವುದರಿಂದ, ಎಲ್ಲರಿಗೂ ಸಮಾನವಾದ ವಿದ್ಯಾಭ್ಯಾಸವನ್ನು ನಾವು ಕೊಡಬೇಕಾಗುತ್ತದೆ. ಸಮಾನತೆಯನ್ನು ಎಲ್ಲ ಕಡೆಗಳಲ್ಲೂ ಜಾರಿಗೆ ತರಬೇಕೆಂದು ಇರುವಾಗ ಎಲ್ಲರಿಗೂ ಸಮಾನವಾದ ವಿದ್ಯಾಭ್ಯಾಸವನ್ನು ಕೊಡಬೇಕಾಗುತ್ತ, ಈ ಕಾರಣದಿಂದ ಇಂದಿನ ಸಮಾಜವಾದದ ನೀತಿಯಂತೆ ಯಾವರೀತಿಯಾಗಿ ಇವನ್ನು ಜಾರಿಗೆ ತರಲಿಕ್ಕೆ ಸಾಧ್ಯ ಎಂಬುದನ್ನು ಸರಕಾರದವರು ಯೋಚಿಸಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಇಲ್ಲಿ ತಾವು ಹೇಳುವುದು ತತ್ವದ ಅಭಿಪ್ರಾಯವಾಯಿತು. ಎಲ್ಲವನ್ನೂ ರಾಷ್ಟ್ರೀಕರಣ ಮಾಡಬೇಕಾದರೆ ಅದನ್ನು ಯೋಚನೆ ಮಾಡಬೇಕಾಗುತ್ತದೆ. ಎಲ್ಲವನ್ನು ಒಂದೇ ಸಲ ರಾಷ್ಟ್ರೀಕರಣ ಮಾಡಬೇಕೆಂದು ಹೇಳುವುದು ಈಗಿನ ಪರಿಸ್ಥಿತಿಯಲ್ಲಿ ಕಷ್ಟಕರವಾದ ಕೆಲಸ.

(ಶ್ರೀ ಡಿ. ದೇವರಾಜ್ ಅರಸ್)

1-30 P.M.

ಇದನ್ನು ರಾಷ್ಟ್ರೀಕರಣ ಮಾಡಿ, ಇನ್ನು ಮುಂದೆ ಪ್ರೈವೇಟ್ ಕಾಲೇಜ್ ತೆಗೆಯುವುದು ಬೇಡ ಸರ್ಕಾರವೇ ತೆಗೆಯುಬೇಕು ಎಂದರೆ, ಅಸೆಂಬ್ಲಿ ತೀರ್ಮಾನ ಮಾಡಲಿ. ದುಡ್ಡು ಎಲ್ಲಾ ಎಜುಕೇಷನ್ ಒಂದಕ್ಕೇ ಕೊಡುತ್ತೇವೆ ಎಂದು ಹೇಳಿದರೆ ಆಗ ಸಾಧ್ಯವಾಗುತ್ತದೆ. ಎಲ್ಲಿಯವರೆಗೆ ಎಲ್ಲಾ ದುಡ್ಡು ಅದಕ್ಕೇ ಕೊಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಈಗ ಇರುವ ಂಥಿತಿಯಲ್ಲಿ ಹೋಗಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಕೆಲವು ಖಾಸಗಿ ವಿದ್ಯಾಶಾಲೆಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲ. ವ್ಯಾಪಾರದ ದೃಷ್ಟಿಯಿಂದ ನಡೆಯುವ ಶಾಲೆಗಳಿಗೆ ವಿವ್ಯಾಭ್ಯಾಸ ಮುಖ್ಯ ಉದ್ದೇಶ ವಾಗಿಟ್ಟುಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಲ್ಲ.

ಶ್ರೀ ಡಿ. ದೇವರಾಜ ಅರಸ್.—ಎಲ್ಲೆಲ್ಲಿ ಶಾಲೆಗಳು ಚನ್ನಾಗಿ ಕೆಲಸ ಮಾಡುವುದಿಲ್ಲ, ತಮ್ಮ ಹತ್ತೂಟಿ ಯಲ್ಲಿ ಸರಿಯಾಗಿ ಇಚ್ಚಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರೆ ಅದನ್ನು ಸರಿಪಡಿಸುವುದು ನಮ್ಮ ಜವಾಬ್ದಾರಿ. ಹಾಗೆಂದ ಮಾತ್ರಕ್ಕೆ ಎಲ್ಲಾ ತೆಗೆದುಕೊಂಡು ಬಿಡುವುದು ಕಷ್ಟ.

Sri D. B. KALMANKAR.—In answer to Sri Bapu Gowda the Hon. Minister was pleased to say that it was a suggestion for action. If it is a suggestion for action, when does the Government want to nationalise these schools ?

[*No Answer*]

Murder Cases in Belgaum District

501. Sri B. B. SAYANAK (Belgaum).—

Will the Chief Minister be pleased to state :—

(*a*) the number of murder cases registered in Belgaum district from 1st May 1971 to 1st May 1972 ;

(*b*) the number of persons arrested in these cases, convicted and the number of persons acquitted ?

Sri D. DEVARAJ URS (Chief Minister).—

(*a*) 93 cases were registered.

(*b*) 195 persons were arrested and sent up for trial. Out of these 195 persons, 10 persons were convicted and 29 persons were acquittede.

Sri B. B. SAYANAK.—Out of these 93 murder cases which are registered in Belgaum District, how many are pertaining to property, how many to ladies and how many to political porties ?

† Sri D. DEVARAJ URS.—If a separate question is put, I will furnish the answer.

Sri B. B. SAYANAK.—May I know in which murder case more number of persons are arrested and in which murder case less number of persons are arrested ?